ಮೈಸೂರ ಗೆಜೆಟ್.

ನಂ. 35 ಸರ್ಕಾರದಿಂದ ಫಾಯಿಸ್. ಆದ್ದು. ಸ್ನ 1887.

ಬೆಂಗಳೂರು, ಶನಿವಾರ, ಸೆಪ್ಟೆಂಬರ್ ತಾ|| 3, ಸ್ನ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವ್ಯಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ|| ಡೆಪ್ಯುಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಆಗಸ್ಟು 1887.

ನಂ. 77.—ಮಕ್ಕಾಕ್ಕೆ ಖುಷ್ಕೀಮೇಲೂ ಸಮುದ್ರದ ಮೇಲೂ ಪ್ರಯಾಣ ಮಾಡುವಂತಾವರಿಗೆ ಜೋಕೆ ಮತ್ತು ಅನುಕೂಲ್ಯತೆ ವುಂಟು ಮಾಡಿಕೊಡುವ ಬಗ್ಯೆ ಇಂಡಿಯಾ ಗವರ್ಣಮೆಂಟಿನವರು ಮೆ|| ತಾಮ್ಸನ್‌ಕೂಕ್ ಅಂಡರ್ಸನ್ಸ್‌ಯವರನ್ನ ವಿಜಂಟರಾಗಿ ನೇಮಿಸಿ ಅದಕ್ಕಾಗಿ ವಿರ್ಪಾಟುಗಳನ್ನ ಮಾಡಿರುವದರಿಂದ ಮಕ್ಕಾಕ್ಕೆ ಪ್ರಯಾಣ ಮಾಡಲಿಛೆಯುಳ್ಳ ಜನಗಳು ಸದರೀ ವಿರ್ಪಾಡಿಗೆ ನಿಗೇ ಕೊಡತಕ್ಕದ್ದು.

2. ಸದರೀ ವಿರ್ಪಾಡುಗಳಿಂದ ವುಂಟಾಗಿರುವ ಪ್ರಯೋಜನಗಳ ತಪಸೀಲ್ ಮೈಸೂರು ಶೀಮೆಯ ಡಿಸ್ಟ್ರಿಕ್ಟುಗಳ ಡೆಪ್ಯುಟೆ ಕಮ್ಮಿಷನರ ಆಫೀಸ್‌ಗಳಿಗೆ ಅರ್ಜೀ ಬರದುಕೊಂಡಲ್ಲಿ ತಿಳಿಯಬರುತ್ತೆ.

ನಂ. 86. ತಾರೀಖು 12ನೇ ಆಗಸ್ಟು 1887.

ಸರ್ಕಾರ ಹರಾಜು ಮೂಲಕ ಸಂದಲ್ ಬಿಕರೀ ಬಗ್ಯೆ ಇದರಡೀ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್ ಸಕಲರಿಗೂ ತಿಳಿಯತಕ್ಕ ಬಗ್ಯೆ ಘಾಯಿಷ್ ಮಾಡಲ್ಪಟ್ಟಿವೆ.

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರೊಡನೆ ಫಾರೆಸ್ಟು ಆಫೀಸರಿಂದಾಗಲಿ, ಡೆಪ್ಯೂಟಿ ಕಮ್ಮಿಷನರವರಿಂದ ಆ ಬಗ್ಯೆ ನಿಯಮಿಸಲ್ಪಡುವ ಇತರ ಆಫೀಸರಿಂದಲಾಗಲಿ ನಡಿಸಲ್ಪಡತಕ್ಕದ್ದು.

2. ಚಡ್ಡಿ ದರಖಾಸ್ತುದಾರ ಕ್ರಯದಾರನಾಗಿರತಕ್ಕದ್ದು—ಯಾವ ಲಾಟಿನ ವಿಷಯದಲ್ಲಿ ತಕರಾರು ವುಂಟಾಗುತ್ತದೋ ಅಂತಾ ಲಾಟೆ ಪುನಃ ಹರಾಜ್ ಮಾಡಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ವೊಂದು ಲಾಟ್ ತನ್ನ ಹೆಸರಿಗೆ ಕೂಗಿದ ಕೂಡ್ಲೇ ರುಜೂ ಮಾಡತಕ್ಕ ಬಗ್ಯೆ ಯೇರ್ಪಡಿಸಲ್ಪಟ್ಟಿರುವ ಬುಕ್ಕಿನಲ್ಲಿ ತಾನು ಕೊಂಡು ಕೊಂಡ ಲಾಟಿನ ನಂಬರ್ ಮತ್ತು ತಪಸೀಲ್ ಯಿವುಗಳ ಪಕ್ಕದಲ್ಲಿ ತನ್ನ ರುಜೂ ಹಾಕತಕ್ಕದ್ದು. ಅಂತಾ ರುಜೂ ದೆಕೆಯಿಂದ ಸದರೀ ಲಾಟನ್ನು ಅವನು ಕೊಂಡುಕೊಂಡ ಬಗ್ಯೆ ಅವನ ಅಂಗೀಕಾರವನ್ನಾಗಿ ಯೆಣಿಸಲ್ಪಡತಕ್ಕದ್ದು.

II. ಹಣ ಯಾವ ರೀತಿಯಾಗಿ ಪಾವತೀ ಮಾಡತಕ್ಕದ್ದು.

4. ಹರಾಜಾದ ಕೂಡ್ಲೇ ಖರೀದೀದಾರನಿಂದ ಸಲ್ಲಬೇಕಾದ ಖುಲ್ಲು ವೊಬಲಗನ್ನು ತೋರಿಸುವ ಒಂದು ಯಾದಾಸ್ತು ಪ್ರತಿ ಖರೀದೀದಾರನಿಗೂ ಕೊಡಲ್ಪಡುವದು ಮತ್ತು ಹರಾಜ್ ತಾರೀಖು ಲಾಗಾಯತು 3ನೇ ದಿನ ಆಖೈರಾಗುವದಕ್ಕೆ ಮುಂಚೆ ಖುಲ್ಲು ವೊಬಲಗ್ ಪೈಕೀ ಶೇಕಡಾ 25 ರೂಪಾಯಿ ಪ್ರಕಾರ ಶೇವಣೀ ವೊಬಲಗನ್ನ ಅತ್ಯಂತ ಸಮೀಪದಲ್ಲಿರುವ ಗವರ್ನಮೆಂಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕ ಬಗ್ಯೆ ಲೆಟರ್ ಆಫ್ ಅಡ್ವೈಸ್ ಯಾನೇ ಮೇಲ್ ಕಾಗದ ಕೊಡಲ್ಪಡುವದು ಹಾಂಗೆ ಶೇವಣೀ ಯಿಟ್ಟ ವೊಬಲಗಿಗೆ ಟ್ರೆಜರೀ ಆಫೀಸರರು ಒಂದು ರಸೀದಿಯನ್ನು ಕೊಡತಕ್ಕದ್ದು ಸದರೀ ರಸೀದಿಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟು ಆಫೀಸರರಲ್ಲಿ ಹಾಜರ್ಮಾಡತಕ್ಕದ್ದು, ಫಾರೆಸ್ಟು ಆಫೀಸರರು ಸದರೀ ರಸೀದೀ ಮೇಲೆ ತಮ್ಮ ಚಿಕ್ಕರುಜುವನ್ನು ಹಾ: ಹಾಜರ್ಮಾಡಿದ ತಾರೀಖು ಸಹ ಬರಿಯತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೇ ಪ್ರಕಾರ ನಡಿಯಲಿಕ್ಕೆ ತಪ್ಪಿದರೆ ಫಾರೆಸ್ಟು ಆಫೀಸರರು ಹಾಂಗೆ ತಪ್ಪಿದವನಿಂದ ಕೊಂಡುಕೊಳ್ಳಲ್ಪಟ್ಟ ಸಂದಲ್ ಪೈಕೀ ದರೋಬಸ್ತನ್ನಾಗಲಿ ವೊಂದು ಭಾಗವನ್ನಾಗಲಿ ಇತರರಿಗೆ ಮಾರಲಿಕ್ಕೆ ಸ್ವತಂತ್ರರಾಗಿರತಕ್ಕದ್ದು. ಇದರ ದೆಸೇಯಿಂದ ಸಂಭವಿಸುವ ನುಕ್ಸಾನಿಗೆ ಸದರೀ ತಪ್ಪಿದ ಮನುಷ್ಯನು ಜವಾಬ್ದಾರನಾಗಿ ಯಿರತಕ್ಕದ್ದಲ್ಲದೇ ಅದರಿಂದ ಯೇನಾದರೂ ಆದಾಯ ಬಂದರೆ ಅಂತಾ ಆದಾಯದಲ್ಲಿ ಆತನಿಗೆ ಯಾವ ಭಾಗವೂ ಸಲ್ಲತಕ್ಕದ್ದಲ್ಲ. ಹಾಂಗೆ ತಪ್ಪಿ ಹೋದ ಮನುಷ್ಯನಿಂದ ಬರಬೇಕಾದ ಬಾಕಿಯು ರೆವಿನ್ಯೂ ಕಂದಾಯದೋಪಾದಿಯಲ್ಲಿ ವಸೂಲ್ ಮಾಡಲ್ಪಡುವದು.

5. ಪ್ರತಿ ಪರ್ತಕನಿಂದ ಕೊಂಡುಕೊಳ್ಳಲ್ಪಡುವ ದರೋಬಸ್ತು ಸಂದಲಿಗೂ ಖರೀದೀ ವೊಬಲಗ್ ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು. ಯಿದಕ್ಕೆ ತಪ್ಪಿದರೆ ಶೇವಣೀ ಕೊಟ್ಟ ವೊಬಲಗ್ ಸರಕಾರಕ್ಕೆ ದಾಖಲಾಗುವದು ಮತ್ತು ಸದರೀ ವೊಬಲಗ್ ಪಾವತೀ ಮಾಡಲ್ಪಡಬೇಕಾದ ವೊಬಲಗ್ ಪೈಕೀ ವೊಂದು ಭಾಗವನ್ನಾಗಿ ಯಂದಿಗೂ ಯೆಣಿಸಲ್ಪಡಕೂಡದು ಬಾಕೀ ಆಗುವ ಐವಜು ಯಾವ ತಾಲ್ಲೂಕಿನಲ್ಲಿ ಕೋರೀ ಯೇರ್ಪಟ್ಟಿರುತ್ತೋ ಅಂತಾ ತಾಲ್ಲೂಕಿನ ಖಜಾನೇಯಲ್ಲಾಗಲಿ, ಡಿಸ್ಟ್ರಿಕ್ಟು ಟ್ರೆಜರೀಯಲ್ಲಾಗಲಿ, ಪಾವತೀ ಮಾಡಲ್ಪಡತಕ್ಕದ್ದೇ ಹೊರ್ತು ಮತ್ಯಾವ ಸ್ಥಳದಲ್ಲಿಯೂ ಪಾವತೀ ಮಾಡಲ್ಪಡತಕ್ಕದ್ದಲ್ಲ.

III. ಸಂದಲು ತೂಕ ಮಾಡುವಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಸಂದಲೂ ಫಾರೆಸ್ಟು ಆಫೀಸರರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ್ ಹಾಜರೀಯಲ್ಲಿ ಡೆಪ್ಯೂಟಿ ಕಮ್ಮಿಷನರರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರರಿಂದಲಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು, ಪ್ರತಿ ಕೋರಿಯಲ್ಲಿ ಮಾರಲ್ಪಟ್ಟ ಸಂದಲ್ ತೂಗೋಣವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸತಕ್ಕದ್ದು, ತೂಕ ಮಾಡುವಲ್ಲಿ ಜಾಸ್ತೀ ಕಾಣಬಂದರೆ ಅಂತಾ ಜಾಸ್ತಿಯನ್ನು ಆಚೆಗೆ ಬಿಗದುಕೊಳ್ಳತಕ್ಕದ್ದು. ಯೇನಾದರೂ ಕಮ್ಮೀ ಬಿದ್ದಲ್ಲಿ ತೂಗಿಸುವ ಆಫೀಸರರು ಭರ್ತೀಮಾಡಿ ಘಾಪಾ ಹಾಕಬಹುದಾದ ತುಂಡುಗಳಿಗೆ ಘಾಪಾ ಹಾಕಿ ಕುದ್ದಾಂಗವಾಗಿ ಅವು ಸಾಗಿ ಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಕಮ್ಮಿಬಿದ್ದ ಸಂದಲ್ ವೊಂದುದಫಾ ಪೂರಾ ಭರ್ತೀಯಾದ ಬಳಿಕ ವಣಗುವ ದೆಶೇಯಿಂದಲಾಗಲಿ, ಯಿತರ ಕಾರಣಗಳಿಂದಲಾಗಲಿ ಯೇನಾದರೂ ಲುಕ್ಸಾನ್ ಸಂಭವಿಸಿದರೆ ಆ ಲುಕ್ಸಾನನ್ನು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟ್

667

ಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದೀದಾರನಿಗೆ ಎಚ್ಚರಿಕೆ ಕೊಡತಕ್ಕದ್ದು. ಆ ಪ್ರಕಾರ ಅವನೇ ಆಗಲಿ ಅವನಿಂದ ಪೂರಾ ಅಧಿಕಾರ ಪಡದ ಅವನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟು ಆಫೀಸರರು ಯಾ ವಜನೀ ಮಾಡಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರರು ತಮಿಗೆ ಅನುಕೂಲ ವಾದಾಗ್ಯೆ ಲಾಟ್‌ಗಳನ್ನು ತೂಗಿಸಿ ಸ್ಟ್ಯಾಂಪು ವ ಮುದ್ರೆ, ಹಾಕಿಸತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲ. ಸಂದಲ್ ತೂಕ ಮಾಡುವ ಬಗ್ಗೆ ತಗಲುವ ಖರ್ಚು ಸರಕಾರವೇ ವಹಿಸುವದು. ಆದರೆ ಕೋಠಿಯಿಂದ ಕುದ್ದಾಂಗ ಸಾಗಿಸಿಕೊಂಡು ಹೋಗಲಿಕ್ಕೆ, ಜರೂರಾದ ದರೋಬಸ್ತು ಖರ್ಚುಗಳನ್ನೂ ಖರೀದೀದಾರ ವಹಿಸತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಜಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತೀ ಮಾಡಿದರೆ ಅಂತಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟು ಆಫೀಸರರು ತೂಕ ಮಾಡುವ ದರಿಂದ ಯಾವದೂ ಅಡ್ಡೀ ಪಡಿಸತಕ್ಕದ್ದಲ್ಲ.

7. ಪೂರಾ ಮೊಬಲಗು ಪಾವತೀ ಮಾಡುವ ಪರಿಯಂತ ಮತ್ತು ಫಾರೆಸ್ಟು ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡಿಯುವ ವರಿವಿಗೂ, ಯಾವ ಸಂದಲ್ ಮರವನ್ನಾಗಲೀ ಸಾಗಿಸಕೂಡದು.

IV. ಕೋಠೀ ಬಾಡಿಗೆ.

8. ಮೇಲಿನ ರೂಲ್ಸ್ ಅನುಸರಿಸಿ ತೂಕ ಮಾಡಲ್ಪಟ್ಟ ಸ್ಟ್ಯಾಂಪು ಹಾಕಲ್ಪಟ್ಟ ಮತ್ತು ಮೊಬಲಗು ಪಾವತೀ ಮಾಡಲ್ಪಟ್ಟ ಸಂದಲ್ ಮರವು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗೆ ಯಾವ ಕಾಲದಲ್ಲಾಗಲಿ, ಕೋಠೀ ಬಾಡಿಗೇ ಕೊಡದೇ ಸಾಗಿಸಿಕೊಳ್ಳಲ್ಪಡಬಹುದು ಅಂತಾ ಮರವನ್ನು ಹರಾಜ್ ತಾರೀಖು ಲಾಗಾಯತು 90 ದಿನಗಳಿಗೆ ಮೇಲೆ ಕೋಠಿಯಲ್ಲೇ ಬಿಟ್ಟಿದ್ದರೆ ಹರಾಜ್ ತಾರೀಖು ಲಾಗಾಯತು ಮಾಹೇ ಬಂದಕ್ಕೆ ದರ ಬಂಡಿಗೆ 4 ಆಣೇ ಪ್ರಕಾರ ಕೋಠೀ ಬಾಡಿಗೆ ಕಟ್ಟಲ್ಪಡುವದು ಅಂತಾ ಸಂದಲ್ ಯಿಟ್ಟಿರುವ ಜಾಗಾ ಹೊಸ ಸಂದಲ್ ಜವಾಯಿಸಿ ಯಿಡಲಿಕ್ಕೆ ಬೇಕಾದ ಪಕ್ಷದಲ್ಲಿ ಖರೀದೀದಾರನಿಗೆ 10 ದಿನಗಳ ನೋಟೀಸು ಕೊಟ್ಟು ಬಳಿಕ ಫಾರೆಸ್ಟು ಆಫೀಸರರು ಸದರೀ ಮರವನ್ನು ಕೋಠೀಯಿಂದ ಆಚೆ ಸಾಗಿಸಲಿಕ್ಕೂ ಮತ್ತು ಖರೀದೀದಾರನ ಲಾಗವಡಿನಲ್ಲಿಯೂ ಮತ್ತು ಹಾಂಗೆ ಹೊರಗೆ ಹಾಕಿಸೋ ಣದರಿಂದ ಸಂಭವಿಸಬಹುದಾದ ಲುಕ್ಸಾನಿಗೆ ಸಹ ಖರೀದೀದಾರನ್ನ ಗುರಿಮಾಡಿ ಸದರೀ ಮರವನ್ನು ಕೋಠೀ ಆಚೆ ಅಮಾನತ್ತು ಯಿಡಿಸಲಿಕ್ಕೂ ಸ್ವತಂತ್ರರಾಗಿರತಕ್ಕದ್ದು.

V. ಸಾಗಿಸಲಿಕ್ಕೆ ಲೈಸೆನ್ಸ್.

9. ಇಂಚಾರ್ಜ್ ಆಫೀಸರರಿಂದ ದಸ್ತಖತ್ ಆದ "ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್" ಪಡಿಯುವ ಪರಿಯಂತ ಕೋಠೀಯಿಂದ ಯಾವ ಮರವನ್ನೂ ಸಾಗಿಸಕೂಡದು. ಅಂತಾ ಲೈಸೆನ್ಸುವುಳ್ಳ ದರೋಬಸ್ತು ಜನಗಳೂ ಅಂತಾ ಲೈಸೆನ್ಸುಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು, ತನ್ನ ಲೈಸೆನ್ಸ್ ಷರತ್ತುಗಳನ್ನು ಅತಿಕ್ರಮಿಸುವ ಮತ್ತು ಕೊಡಲ್ಪಟ್ಟ ವಾಯಿದೇ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸ್ ಮಾಡದ ಯಾವ ವರ್ತಕನಾಗಲೀ ಇತರ ಮನುಷ್ಯನಾಗಲೀ ಮೈಸೂರು ಫಾರೆಸ್ಟು ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ನಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

VI. ಜನರಲ್.

10. ಖಾಯಂ ನಿಬಂಧನೆಗಳನುಸಾರವಾಗಿ ಮೈಸೂರು ಶೀಮೇ ಗಡಿಗಳೊಳಗೆ ಯಾವ ಸಂದಲ್ ಮರವೂ ಖುಷ್ ಬಾಷ್ ಜನಗಳಿಂದ ಮಾರಲ್ಪಡಕೂಡದು, ಅಥವಾ ರೇಂಜ್ ಇಂಚಾರ್ಜ್ ಫಾರೆಸ್ಟು ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಶಿವಾಯಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡತಕ್ಕದ್ದಲ್ಲ.

11. ಯಿಂಚಾರ್ಜ್ ಫಾರೆಸ್ಟು ಆಫೀಸರರು ಖರೀದಿಗೆ ತೆಗದುಕೊಳ್ಳಲಿಚ್ಛೈಸುವ ಜನಗಳಿಗೆ ಯಾವದೊಂದು ಸಬಬೂ ತಿಳಿಸದೇ ಹರಾಜನ್ನು ಯಾವ ಕಾಲದಲ್ಲಾಗಲಿ ನಿಲ್ಲಿಸಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ತಾರೀಖು 18ನೇ ಆಗಸ್ಟು 1887.

ನಂ. 92.—1877ನೇ ಇಸವಿ IIIನೇ ನಂಬರ್ ರೆಜಿಸ್ಟ್ರೇಷನ್ ಆಕ್ಟಿನ 69ನೇ ಸೆಕ್ಷನ್ ಅನುಸರಿಸಿ, ಮೈಸೂರು ಶೀಮೆಯ ರೆಜಿಸ್ಟ್ರೇಷನ್ ಯಿನ್ಸ್‌ಪೆಕ್ಟರ್ ಜನರಲ್ ಯವರಿಂದ ಮಾಡಲ್ಪಟ್ಟ ರೆಜಿಸ್ಟ್ರೇಷನ್ ರೂಲ್ಸುಗಳ 89ನೇ ಕಲಮಿಗೆ ಶೇರಿಸಲ್ಪಟ್ಟಿರುವ ಈ ಕೆಳಗೆ ಕಂಡ ಜಾಸ್ತೀ ನಿಬಂಧನೆಯು ಮಂಜೂರಾತಿಯನ್ನು ಹೊಂದಿ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

ಕಲಮು 89 A. (1.) ಇದರ ಕೆಳಗೆ ನಮೂದಾಗುವ ದಸ್ತಾವೇಜುಗಳು, ಯಿದುವರೆವಿಗೂ 1ನೇ ನಂಬರ್ ರೆಜಿಸ್ಟರ್ ಬುಕ್ಕಿನಲ್ಲಿ ದಾಖಲ್ ಮಾಡಲ್ಪಡುತ್ತಾ ಯಿದ್ದದ್ದಕ್ಕೆ ಬದಲಾಗಿ "1ನೇ ನಂಬರ್ ಸ್ಪೆಶಲ್ ಮೆಂಟೇರಿ ರೆಜಿಸ್ಟರ್ ಬುಕ್ಕು" ಯಂಬ ಹೆಸರುಳ್ಳ ಅಲಾಹಿದ ಬುಕ್ಕಿನಲ್ಲಿ ಶೇರಿಸಿಡಲ್ಪಟ್ಟು, ಆ ದಸ್ತಾವೇಜುಗಳು ಸ್ಪೆಶಲ್ ಮೆಂಟೇರಿ ಬುಕ್ಕಿನ ಫಲಾನೇ ಪುಟಿಗಳಲ್ಲಿ ಚಿಕಟಾಯಿಸಲ್ಪಟ್ಟವೆ ಯಂಬದಾಗಿ, 1ನೇ ನಂಬರ್ ರೆಜಿಸ್ಟರ್ ಬುಕ್ಕಿನೊಳಗೆ ಸರಿಯಾದ ಸ್ಥಳದಲ್ಲಿ ಪೊಂದು ಷರಾ ನಮೂದಿಸತಕ್ಕದ್ದು:—

(a) ಮ್ಯಾಪುಗಳ ವ ಪ್ಲಾನುಗಳ ನಕಲುಗಳು (ಸೆಕ್ಷನ್ 61.)

(b) ಇತರ ರೆಜಿಸ್ಟರಿಂಗ್ ಆಫೀಸರುಗಳಿಂದ ಬಂದ ದಸ್ತೈವಜುಗಳ ನಕಲ್‌ಗಳು ವ ಮಿಮೋರಾಂಡಂಗಳು (ಸೆ|| 64ರ ಲಾಗಾಯತು 67ರ ವರೆವಿಗೆ.)

(c) 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ ಅನುಸರಿಸಿ ರೆವಿನ್ಯೂ ಆಫೀಸರುಗಳಿಂದ ಕೊಡೋಣಾಗುವ ಸರಟಿಫಿಕೇಟ್‌ಗಳ ನಕಲುಗಳು, ಮತ್ತು ಸಿವಿಲ್ ಪ್ರೊ|| ಕೋಡಿನ 316ನೇ ಸೆಕ್ಷನ್ನನುಸರಿಸಿ ಕೋರ್ಟುಗಳಿಂದ ಕೊಡೋಣಾಗುವ ಹರಾಜ್ ಸರಟಿಫಿಕೇಟ್‌ಗಳ ನಕಲುಗಳು (ಸೆಕ್ಷನ್ 89.)

(d) ರೂಢಿಯಲ್ಲಿಲ್ಲದ ಭಾಷೆಗಳಲ್ಲಿ ಬರೆಯಲ್ಪಟ್ಟ ದಸ್ತಾವೇಜುಗಳ ತರ್ಜುಮೆ ವ ನಕಲುಗಳು (ಸೆಕ್ಷನ್ 62.)

(2.) ಸದರೀ ದಸ್ತಾವೇಜುಗಳಿಗೆ ನಂಬರು ಕೊಡೋಣ ವ ಇಂಡೆಕ್ಸ್ ಮಾಡೋಣ ಯಿವುಗಳ ಕ್ರಮವು ರೂಲ್ಸಿನ 88ನೇ ಕಲಮಿನ ಆಖೈರ್ ಭಾಗದಲ್ಲಿ ವಿಧಿಸಲ್ಪಟ್ಟಿರುವ ಕ್ರಮವನ್ನೇ ಅನುಸರಿಸಿರತಕ್ಕದ್ದು.

ತಾರೀಖು 20ನೇ ಆಗಸ್ಟು 1887.

ನಂ. 94.—ಕೋಲಾರ ತಾಲ್ಲೂಕು ಅಮಲ್‌ದಾರ್ ಮಿರ್ನಿಜಾಮುದ್ದೀನ್ ಅಲ್ಲೀಖಾರ್ರು, ಮಾಹೇ ಮಜಕೂರು 5ನೇ ಮರ್ತುಂ 72ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಅವರಿಗೆ ಕೊಡಲ್ಪಟ್ಟ 17 ದಿವಸಗಳ ಪ್ರಿವಿಲೀಜ್ ರಜಾವನ್ನು ಮಾಹೇ ಗುಜಸ್ತಾ 12ನೇ ಮರ್ತುಂ ಲಾಗಾಯತು ಉಪಯೋಗಿಸಿಕೊಂಡು ಕಳದ ಮಾಹೇ 23ನೇ ಮರ್ತುಮಿನಲ್ಲಿ ಮರಳಿ ಉದ್ಯೋಗದ ಮೇಲೆ ಹಾಜರಾಗಿರುವದರಿಂದ ಉಪಯೋಗಿಸಿಕೊಳ್ಳದ ಭಾಗ ಅಂದರೆ 6 ದಿವಸಗಳ ರಜಾ ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 95.—ಮೆ|| ನಂಜರಾಜೇ ಅರಸಿನವರು, ಮಳವಳ್ಳಿ ತಾಲ್ಲೂಕು ಚಾರ್ಜನ್ನ ಮಾಹೇ ಮಜಕೂರು 5ನೇ ಮರ್ತುಮಿನ ಪೂರ್ವಾನ್ಹದಲ್ಲಿ ನಂಜುಂಡಮೊದಲಿಯಾರ್‌ಗೆ ಒಪ್ಪಿಸಿರುತ್ತಾರೆ.

ಕ್ಯಾಂಪ್ ನಂ. 926.—ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟ್ ಮೆ|| ಕುಪ್ಪುಸ್ವಾಮಿ ಮೊದಲಿಯಾರ್‌ಗೆ 1887ನೇ ಇಸವಿ ಜುಲೈ 5ನೇ ಮರ್ತುಂ 50ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ಮಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 937.—ಮೈಸೂರಲ್ಲಿಯ ಆನರೇರಿ ಸರಜಿರ್ಯ ಮೆ|| ಯಸ್. ಆರೋಕ್ಯಂಬಿಳ್ಳೈಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 938.—ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟರಾದ ಮೆ|| ಬಿ. ಇ. ಎಂ. ರಸ್ಸೆಲ್‌ಯವರಿಗೆ, ಮಾಹೆ ಮಜಕೂರು 17ನೇ ಮರ್ತುಂ ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಆಗಸ್ಟು 1887.

ಕ್ಯಾಂಪ್ ನಂ. 954.—ಶ್ರೀನಿವಾಸಪುರ ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್‌ದಾರ್ ವಿ. ಆರ್. ಗೋಪಾಲರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಒಂದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಆಗಸ್ಟು 1887.

ನಂ. 96.—ಶಿಡ್ಲಘಟ್ಟದ ಅಮಲ್‌ದಾರ್ ಗುಂಡಪ್ಪನವರು, ಅವರಿಗೆ 1887ನೇ ಇಸವಿ ಜುಲೈ 27ನೇ ಮರ್ತುಂ 63ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾವನ್ನು 1887ನೇ ಇಸವಿ ಜುಲೈ 30ನೇ ತಾರೀಖು ಮೊದಲು ಉಪಯೋಗಿಸಿಕ್ಕೊಂಡು ಮಾಹೇ ಗುಜಸ್ತಾ 20ನೇ ಮರ್ತುಮಿನಲ್ಲಿ ಮರಳಿ ಉದ್ಯೋಗದ ಮೇಲೆ ಹಾಜರಾಗಿರುವದರಿಂದ ಉಪಯೋಗಿಸಿಕೊಳ್ಳದ ಭಾಗ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 25ನೇ ಆಗಸ್ಟು 1887.

ನಂ. 97.—ಪರೀಕ್ಷೆಯಲ್ಲಿ ತೇರ್ಗಡೆಯಾದವರ ಇದರಡೀ ಕಂಡ ದರ್ಜೀವಾರ್ ಪಟ್ಟಯು ಘಾಯಿಷ್‌ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಕ್ರಿಮಿನಲ್ ಪರೀಕ್ಷೆ.

ದರ್ಜೀನಂಬರ್.	ರಿಜಿಸ್ಟರ್ ನಂಬರ್.	ಹೆಸರು.	ಉದ್ಯೋಗದ ಹೆಸರು.	ಯಾವ ಭಾಷೆಯಲ್ಲಿ ಪರೀಕ್ಷೆಸಲ್ಪಟ್ಟದ್ದು.
1	2	ಎಲ್. ಕೃಷ್ಣರಾವ್ ..	ಕಡೂರು ಡಿಸ್ಟ್ರಿಕ್ಟ್ ರೆಕಾರ್ಡು ಕೀಪರ್ ..	ಇಂಗ್ಲೀಷ್.
2	25	ಅಬ್ದುಲ್ ರಹೀಂ ಮೆಕ್ರಿ ..	ಚಿತ್ರದುರ್ಗದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಡೆಪ್ಯುಟಿ ಅಕೌಂಟೆಂಟ್ ..	ಡಿಟೋ
3	15	ಟಿ. ಎಂ. ನಾರಣಯ್ಯ ..	ಚೀಫ್ ಕೋರ್ಟು ಟ್ರಾನ್ಸ್‌ಲೇಟರ್ ..	ಡಿಟೋ
4	28	ಬೇಲೀ ಶ್ರೀನಿವಾಸರಾವ್ ..	ಕೋಲಾರ್ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಹೆಡ್ ಕ್ಲರ್ಕ್ ..	ಡಿಟೋ
5	31	ಡಿ. ಶಾಮಂಣ ..	ಕೋಲಾರದ ಟ್ರೈಜರೀ ಅಕೌಂಟೆಂಟ್ ..	ಡಿಟೋ
6	43	ಮಹಮ್ಮದ್‌ರಜಾ ..	ಅರಕಲ್‌ಗೂಡು ತಾ|| ಪೊಲೀಸ್ ಇನ್‌ಸ್ಪೆಕ್ಟರ್ ..	ಕನ್ನಡ
7	14	ಬಿ. ಎಲ್. ಕೃಷ್ಣರಾವ್ ..	ದೀವಾನರವರ ಆಫೀಸ್ ಕ್ಲರ್ಕ್ ..	ಇಂಗ್ಲೀಷ್
8	21	ಸಿ. ರಾಜಗೋಪಾಲಾಚಾರ್ಯರ್ ..	ಬೆಂಗಳೂರು ಡಿಸ್ಟ್ರಿಕ್ಟ್ ರೆವಿನ್ಯು ಪ್ರೊಬೇಷನರ್.	ಡಿಟೋ
9	34	ಪಿ. ಸುಬ್ಬರಾವ್ ನಾಯಿಡು ..	ಕ್ಯಾಸಲ್‌ಟಿಂಗ್ ಇಂಜನಿಯರ್ ಆಫೀಸ್ ಹೆಡ್ ಕ್ಲರ್ಕ್.	ಡಿಟೋ
10	23	ಬಿ. ಕೃಷ್ಣರಾವ್ ..	ಕೋಲಾರದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಕ್ಲರ್ಕ್	ಡಿಟೋ
11	12	ವಿ. ಪಾರಥಸಾರದಯ್ಯಂಗಾರ್ ..	ದಿವಾನರವರ ಆಫೀಸ್ ಕ್ಲರ್ಕ್ ..	ಡಿಟೋ
12	18	ಎಂ. ಎ. ತಿರುಮಲಾಚಾರ್ ..	ತೀರ್ಥಹಳ್ಳೀ ತಾ|| ಅಮಲ್ದಾರ್ ..	ಡಿಟೋ
13	68	ಎ. ಕೃಷ್ಣೀ ಅರಸ್ ..	ಮೈಸೂರು ಡಿಸ್ಟ್ರಿಕ್ಟ್ ಪ್ರೊಬೇಷನರ್ ..	ಡಿಟೋ
14	22	ಟಿ. ವೆಂಕಟರಾವ್ ..	ಷಿಕಾರಿಪುರ ತಾಲ್ಲೂಕು ಅಮಲ್ದಾರ್ ..	ಕನ್ನಡ
15	51	ಎಸ್. ವೆಂಕಟರಮಣಯ್ಯ ..	ಹಾಸನದ ರೆವಿನ್ಯೂ ಹೆಡ್ ಅಕೌಂಟೆಂಟ್ ..	ಡಿಟೋ
16	41	ಎಂ. ಅಜೋಬಲಶಾಸ್ತ್ರಿ ..	ರೆವಿನ್ಯೂ ಸರ್ವೇ ಸೂಪರ್‌ಟೆಂಡೆಂಟರವರ ಆಫೀಸ್ ಕಾರಕೂನ್	ಇಂಗ್ಲೀಷ್
17	61	ಕೃಷ್ಣಮೂರ್ತಿ ..	ಯಡತೊರೆ ತಾ|| ಅಮಲ್ದಾರ್ ..	ಡಿಟೋ
18	54	ಬಿ. ವೆಂಕಟಾಚಲಯ್ಯ ..	ಹಾಸನದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಹೆಡ್ ಕ್ಲರ್ಕ್	ಡಿಟೋ
19	26	ಬಿ. ಸೀತಾರಾಮಯ್ಯ ..	ಬೆಂಗಳೂರು ತಾ|| ಅಮಲ್ದಾರ್ ..	ಡಿಟೋ
20	75	ಮೆ|| ಹೆಚ್. ಹೆಚ್. ಸ್ಪಾರ್ಕಸ್ ..	ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟ್	ಡಿಟೋ
21	36	ಪಿ. ಸೀತಾರಾಮಯ್ಯ ..	ಶಿವಮೊಗ್ಗಾ ತಾ|| ಅಮಲ್ದಾರ್ ..	ಡಿಟೋ
22	8	ಸಿ. ನಾರಾಯಣರಾವ್ ..	ಮೈಸೂರ್ ತಾ|| ಸಿರಸ್ತೇದಾರ್ ..	ಕನ್ನಡ
23	71	ಸಿ. ಶಾಮಯ್ಯಂಗಾರ್ ..	ಪಾವಗಡ ತಾ|| ಅಮಲ್ದಾರ್ ..	ಇಂಗ್ಲೀಷ್

ಏವೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.